262 (156) : ಕಟ್ಟಾ ಸುಬ್ರಮಣ್ಯ ನಾಯ್ಡು (ಶಿವಾಜಿನಗರ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕನ್ನಡ ಭಾಷೆಗೆ ಶಾಸ್ತ್ರೀಯ ಭಾಷೆ ಸ್ಥಾನಮಾನ ನೀಡಲು ಕೇಂದ್ರ ಸರ್ಕಾರವನ್ನು ಒತ್ತಾಯಿಸಲು ಸರ್ಕಾರ ಇಲ್ಲಿಯವರೆಗೆ ಕೈಗೊಂಡ ಕ್ರಮಗಳೇನು?

ಶ್ರೀ ಎನ್. ಧರ್ಮಸಿಂಗ್ (ಮುಖ್ಯಮಂತ್ರಿಗಳು)

ಅ) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ಹಿರಿಯ ವಿದ್ವಾಂಸರು ಹಾಗೂ ಗಣ್ಯರನ್ನೊಳಗೊಂಡ ಸಭೆಯಲ್ಲಿ ಕನ್ನಡಕ್ಕೆ ಶಾಸ್ತ್ರೀಯ ಭಾಷೆ ಸ್ಥಾನಮಾನ ನೀಡುವ ಕುರಿತು ಭಾರತ ಸರ್ಕಾರಕ್ಕೆ ಸಲ್ಲಿಸಬೇಕಾದ ಮನವಿಯ ಬಗ್ಗೆ ವಿದ್ವಾಂಸರು ಅಭಿಪ್ರಾಯಗಳನ್ನು ನೀಡಿದ್ದು, ಆ ಅಭಿಪ್ರಾಯಗಳನ್ನು ಒಳಗೊಂಡಂತೆ. ಕೇಂದ್ರ ಸರ್ಕಾರಕ್ಕೆ ಸಲ್ಲಿಸಲು ಒಂದು ಮನವಿಯನ್ನು ಸಿದ್ದರಪಡಿಸಲಾಗುತ್ತಿದೆ.

263 (159) : ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು, ಎಂಎಲ್ಎ (ಶಿವಾಜಿನಗರ) ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಂಗಳೂರು ಮಹಾನಗರ ಪಾಲಿಕೆ ಹಾಗೂ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಈಗಾಗಲೇ ಪೂರ್ಣಗೊಳಿಸಿ ಸಂಚಾರಕ್ಕೆ ಒಳಪಡಿಸಿರುವ ಮೇಲು ಸೇತುವೆ ಹಾಗೂ ಸಬ್‌ವೇಗಳ ವಿವರಗಳನ್ನು ನೀಡುವುದು;

ಆ) 2004ರ ಮೇ ತಿಂಗಳಿಂದೀಚೆಗೆ ಯಾವ ಯಾವ ಮೇಲು ಸೇತುವೆ ಹಾಗೂ ಸಬ್‌ವೇಗಳನ್ನು ಪೂರ್ಣಗೊಳಿಸಲಾಗಿದೆ;

ಇ) 2004–05ರಲ್ಲಿ ಹೊಸದಾಗಿ ಕೈಗೊಂಡ ಮೇಲು ಸೇತುವೆ : ಸಬ್ ವೇ, ಗ್ರೇಡ್ ಸೆಪರೇಟರ್ ಕಾಮಗಾರಿಗಳು ಯಾವುವು ಹಾಗೂ ಇವುಗಳ ಅಂದಾಜು ವೆಚ್ಚವೆಷ್ಟು;

ಈ) 2005ರಲ್ಲಿ ಯಾವ ಯಾವ ಮೇಲು ಸೇತುವೆ; ಸಬ್‌ವೇ, ಗ್ರೇಡ್ ಸಪರೇಟರ್ ಕಾಮಗಾರಿಗಳು ಪೂರ್ಣಗೊಳ್ಳುತ್ತವೆ?

ಶ್ರೀ ಎನ್. ಧರ್ಮಸಿಂಗ್ (ಮುಖ್ಯಮಂತ್ರಿಗಳು)

ಅ) 1) ಬೆಂಗಳೂರು ಮಹಾನಗರ ಪಾಲಿಕೆಯು ಈ ಕೆಳಕಂಡ ಮೇಲು ಸೇತುವೆ/ಸಬ್ ವೇಗಳನ್ನು ಪೂರ್ಣಗೊಳಿಸಿ ಸಂಚಾರಕ್ಕೆ ಮುಕ್ತಗೊಳಿಸಿದೆ.

i) ಮೈಸೂರು ರಸ್ತೆಯ ಶಿರಸಿ ವೃತ್ತದಿಂದ ಟೌನ್ ಹಾಲ್ ವರೆಗೆ ಮೇಲು ಸೇತುವೆ.
ii) ರಿಚ್‌ಮಂಡ್ ವೃತ್ತ ಮೇಲು ಸೇತುವೆ.
iii) ಲಿಂಗರಾಜಪುರಂ ಆರ್.ಓ.ಬಿ.
iv) ಮೇಖ್ರಿ ಸರ್ಕಲ್ ಗ್ರೇಡ್ ಸೆಪರೇಟರ್
v) ಸಂಗಮ್ ಟಾಕೀಸ್ ಸಬ್‌ವೇ
vi) ಶಿವಾಜಿನಗರ ಬಸ್ ನಿಲ್ದಾಣದ ಸಬ್‌ವೇ (ಬಿ.ಎಂ.ಟಿ.ಸಿ. ವತಿಯಿಂದ ನಿರ್ಮಿಸಿದೆ).